# ನನ್ನ ದಿನಚರಿಯಿಂದ ಕೆಲವು ಪುಟಗಳು

- **ರವಿ ಪ್ರತಾಪ್ ಸಿಂಗ್**

**15ನೇ ಮಾರ್ಚ್ 2013, ಶುಕ್ರವಾರ:**

ಎಂದಿನಂತೆ ಈ ದಿನವೂ ಒಂದು ಸಾಮಾನ್ಯ ದಿನದಂತೆಯೇ ಪ್ರಾರಂಭಗೊಂಡಿತ್ತು. ಇದು ಭಾವನಾತ್ಮಕ ಸನ್ನಿವೇಶಗಳಿಂದ ತುಂಬಿಕೊಂಡ ಒಂದು ದಿನವಾಗಿ ಹೊರಹೊಮ್ಮುವುದೆಂಬ ಕನಿಷ್ಠ ಕಲ್ಪನೆಯೂ ನನ್ನಲ್ಲಿರಲಿಲ್ಲ. ಆದರೂ, ಆ ಒಂದು ಘಟನೆಗಾಗಿ ನಾನು ಸಿದ್ಧನಾಗಿದ್ದೆ. – ತನ್ನ ಮದುವೆಯಾಗಲಿರುವ ಕಾರಣಕ್ಕಾಗಿ ನೀಲಂ ಶಾಲೆ ಬಿಡಬೇಕಾಗಿತ್ತು ಮತ್ತು ಶಾಲೆಯಲ್ಲಿ ಇಂದು ಅವಳ ಕೊನೆಯ ದಿನವಾಗಿತ್ತು. ಎರಡನೆ ಘಟನೆಯನ್ನು ಕುರಿತು ಹೇಳುವುದಾದರೆ, ಅದರ ಸುಳಿವು ನನಗೆ ಮೊದಲೇ ಸಿಕ್ಕಿದ್ದು ಅದನ್ನು ನಾನು ಮೋನು ಸರ್ ಅವರೊಂದಿಗೆ ಹಿಂದಿನ ದಿನವೇ ಹಂಚಿಕೊಂಡಿದ್ದೆ, ಆದರೆ ಅದು ಇಷ್ಟು ಬೇಗ ಸಂಭವಿಸುವುದೆಂದು ನಾನು ಭಾವಿಸಿರಲಿಲ್ಲ. ನನ್ನ ಪ್ರಕಾರ ಇದು ಬಹುಶಃ ಒಂದು ವರ್ಷದ ಅನಂತರ ನಡೆಯುವುದಿತ್ತು, ಆದರೆ ಹಾಗಾಗಲಿಲ್ಲ.

ಶಾಲೆಯು ಎಂದಿನಂತೆ ಪ್ರಾರಂಭವಾಯಿತು. ನನ್ನ ಎರಡನೆಯ ತರಗತಿಯ ವಿದ್ಯಾರ್ಥಿಗಳು ಮೊದಲಿಗೆ ಹಾಡು ಮತ್ತು ನೃತ್ಯವನ್ನು ಮಾಡಿ ತೋರಿಸಿದರು. ಮೋಜಿನಿಂದ ಕೂಡಿದ ಕ್ವಿಜ್ (ರಸಪ್ರಶ್ನೆ)ಆಟವನ್ನು ಆಡಿದ ಅನಂತರ ತರಗತಿಗಳು ಪ್ರಾರಂಭಗೊಂಡವು. ಮೊದಲ ಅವಧಿಗೆ ಎರಡನೆಯ ತರಗತಿಯಲ್ಲಿ ಗಣಿತದ ಪಾಠ ತೆಗೆದುಕೊಳ್ಳುವುದಿತ್ತು, ಅದಾದ ಅನಂತರ ಎರಡನೆಯ ಅವಧಿಗಾಗಿ ಮೂರನೇ ತರಗತಿಗೆ ಹೋದೆ. ನಾನು ನನ್ನ ಪಾಠವನ್ನು ಪ್ರಾರಂಭಿಸಿದ ಹತ್ತು ನಿಮಿಷಕ್ಕೆ ಆದಿತ್ಯನ ತಾಯಿ ಒಳಬರುವುದನ್ನು ನಾನು ಕಂಡೆ. ಒಂದು ಕ್ಷಣ ಬಹಳ ವಿಚಿತ್ರವೆನಿಸತೊಡಗಿತು – ಆಕೆ ಬರುತ್ತಿರುವುದನ್ನು ಕಂಡ ಕೂಡಲೆ ಒಂದು ಬಗೆಯ ಭೀತಿಯ ನಡುಕ, ಪರೀಕ್ಷೆಯ ಫಲಿತಾಂಶವನ್ನು ಎದುರಿಸುವಾಗಿನ ಭಯದಂತೆ ಭಯವು ನನ್ನನ್ನು ಆವರಿಸತೊಡಗಿತು.

ತರಗತಿಯಿಂದ ಹೊರಬಂದು ವರಾಂಡಾದಲ್ಲಿ ಆಕೆಯನ್ನು ಎದುರುಗೊಂಡ ನಾನು, ಆಕೆ ಏನನ್ನಾದರೂ  ಹೇಳಲು ಪ್ರಾರಂಭಿಸುವ ಮೊದಲೇ, ನಿಮಗೆ ಕರೆ ಮಾಡಬೇಕೆಂದಿದ್ದೆ, ಆದಿತ್ಯ ಕಳೆದ ಎರಡು ದಿನಗಳಿಂದ ಶಾಲೆಗೆ ಬರುತ್ತಿಲ್ಲ ಎಂದು ಹೇಳಿದೆ. ಆ ಸಮಯದಲ್ಲಿ ಆಕೆ ಹೇಳಿದ ಉತ್ತರವೂ ನನ್ನ ಮನಸ್ಸಿನಲ್ಲಿ ಉಳಿದುಕೊಳ್ಳಲಿಲ್ಲ. ನನ್ನ ಕಿವಿಗಳು ಅದನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೋ ಅಥವಾ ಅದನ್ನು ಒಪ್ಪಿಕೊಳ್ಳಲು ನನ್ನ ಮನಸ್ಸು ಸಿದ್ಧ ಇರಲಿಲ್ಲವೋ ನನಗೆ ತಿಳಿದಿಲ್ಲ. ಒಂದು ಕ್ಷಣ ನನ್ನ ಹೃದಯವು ನನ್ನ

ಕಿವಿಗಳನ್ನೂ ಹಾಗೂ ಮನಸ್ಸನ್ನೂ ತನ್ನ ಹಿಡಿತಕ್ಕೆ ತೆಗೆದುಕೊಂಡುಬಿಟ್ಟ ಹಾಗೆನಿಸಿತು. ನನ್ನ ಕಾಲ ಕೆಳಗಿನ  ಕಂಬಳಿಯನ್ನು ಯಾರೋ ಎಳೆದ ಹಾಗೆ ಅಥವಾ ಸಾವಿರ ಅಡಿ ಆಳದ ಪ್ರಪಾತದೊಳಕ್ಕೆ ಯಾರೋ ನನ್ನನ್ನು ಅನಾಮತ್ತಾಗಿ ತಳ್ಳಿದ ಹಾಗೆ ಭಾಸವಾಯಿತು. ಆಕೆ ಆದಿತ್ಯನ ರ‍್ವಾನಣೆ ಪ್ರಮಾಣಪತ್ರ ತೆಗೆದುಕೊಂಡು ಹೋಗಲು ಬಂದಿದ್ದಳು ಎಂಬ ಒಂದು ವಿಚಾರ ಮಾತ್ರ ನನಗೆ ಅರ್ಥವಾಯಿತು. ಏಕೆಂದರೆ, ಅವನ ಅಜ್ಜ ಕೋಪಗೊಂಡು ಅವನನ್ನು ಸೇರಿಸಿದ್ದರು. ನನ್ನನ್ನು ನಾನು ಸಾವರಿಸಿಕೊಳ್ಳಲು ಪ್ರಯತ್ನಿಸುತ್ತ ಸಂಜೆ ಆಕೆಗೆ ಕರೆ ಮಾಡುವುದಾಗಿಯೂ ಪ್ರಮಾಣ ಪತ್ರವನ್ನು ಯಾವಾಗ ಪಡೆದುಕೊಳ್ಳಬಹುದು ಎಂಬುದನ್ನು ತಿಳಿಸುವುದಾಗಿಯೂ ಹೇಳಿದೆ.

ಮಗುವೊಂದು ಶಾಲೆಯನ್ನು ಬಿಟ್ಟು ಹೋಗುವುದರಲ್ಲಿ ಅಂತಹ ವಿಶೇಷತೆಯೇನೂ ಇಲ್ಲ ಮತ್ತು ಒಬ್ಬ ಶಿಕ್ಷಕನ ಬದುಕಿನಲ್ಲಿ ಇದೊಂದು ಹೊಸ ಅನುಭವವೂ ಅಲ್ಲ. ಆದರೆ, ಈ ಒಂದು ಘಟನೆ ನನ್ನನ್ನು ಅದನ್ನು ಬರವಣಿಗೆಯಲ್ಲಿ ಹಿಡಿದಿಡುವಂತೆ ಮಾಡಿತು. ಆದಿತ್ಯನ ತಾಯಿ ಮಾಡಿರುವ ಮನವಿ ಅಥವಾ ಅದಕ್ಕೆ ನಾನು ಕೊಟ್ಟ ಪ್ರತಿಕ್ರಿಯೆ ಸೇರಿದಂತೆ ಇಲ್ಲಿ ಯಾವುದೂ ವಿಶೇಷವಲ್ಲ – ಆದರೆ ಆದಿತ್ಯ? ಖಂಡಿತವಾಗಿಯೂ ಅವನೊಬ್ಬ ಅಸಾಧಾರಣ ಮಗುವಾಗಿದ್ದ, ಅವನ ಬಗ್ಗೆ ಸ್ವಲ್ಪ ಮಾತನಾಡುವುದು ನನ್ನ ಮಟ್ಟಿಗೆ ಬಹಳ ಮುಖ್ಯ.

2ನೆಯ ತರಗತಿಯಲ್ಲಿ ಕಲಿಯುತ್ತಿರುವ 10 ವರ್ಷ ವಯಸ್ಸಿನ ಮಗು ನನ್ನ ಆದಿತ್ಯ.  ಸಾಕಷ್ಟು ಆರೋಗ್ಯ ಸೂಸುವ, ಕೊಂಚ ತುಂಬುಗೆನ್ನೆಯ, ದೊಗಳೆ ಪ್ಯಾಂಟಿನ, ತನ್ನ ಕರ್ತವ್ಯ ಮಾಡಲು ಸೋತ ಬೆಲ್ಟಿನ, ಪ್ಯಾಂಟ್ಸಿನ ಸೊಂಟಪಟ್ಟಿಯಿಂದ ಹೊರಬರಲು ತವಕಿಸುವ ಷರ್ಟಿನ, ಯಾವಾಗಲೂ ಮೂಗನ್ನು ನೆರಿಗೆಗಟ್ಟಿಸಿಕೊಂಡು ಅರೆಮುಚ್ಚಿದ ಕಣ್ಣುಗಳಿಂದ ವಸ್ತುಗಳನ್ನು ನಿರುಕಿಸುವವ. ಆದಿತ್ಯ ನಮ್ಮದೇ ಜಗತ್ತಿನಲ್ಲಿದ್ದರೂ ಅದನ್ನು ಅಷ್ಟಾಗಿ ತಲೆಗೆ ಹಚ್ಚಿಕೊಂಡವನಲ್ಲ. ನಾವಾಗಿ ಅವನನ್ನು ಮಾತಿಗೆಳೆಯದಿದ್ದರೆ ತನ್ನದೇ ಆದ ಸಿಹಿಯಾದ ಪುಟ್ಟ ಜಗತ್ತಿನಲ್ಲಿ ಖುಷಿಯಾಗಿ ವಿಹರಿಸಿಕೊಂಡಿರುವವ. ವಾಹನಗಳು, ರಸ್ತೆಗಳು, ಸಂಚಾರ ದಟ್ಟಣೆ, ಪೊಲೀಸ್, ಸೇನೆ, ಹೆಲಿಕಾಪ್ಟರ್, ಮುಖ್ಯಮಂತ್ರಿ, ಭಾರತ-ಪಾಕಿಸ್ತಾನ, ಡೆಲ್ಲಿ, ಪೆಟ್ರೋಲ್ ಪಂಪ್, ರ‍್ಯಾಲಿ, ಸೈನ್ಯ, ಬಾವುಟ, ಸೈಕಲ್, ಸೇತುವೆ, ಸುರಂಗ ಮಾರ್ಗದಂತಹ ಹತ್ತು ಹಲವು ಸಂಗತಿಗಳು ಕಿಕ್ಕಿರಿದು ತುಂಬಿರುವ ಅವನದ್ದೇ ಆದ ಸುಂದರ ಜಗತ್ತು ಅದು. ಶಾಲೆಯೊಳಕ್ಕೆ ಪ್ರವೇಶಿಸುತ್ತಾ ತನ್ನ ತರಗತಿ ಕೋಣೆಯ ಬಾಗಿಲ ಬಳಿ ಪುಸ್ತಕದ ಚೀಲವನ್ನು ಇರಿಸಿದವನೇ ಶಾಲಾ ಮೈದಾನದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಓಡುವ,  ಒಂದೋ ಮುಂದೆ ಇರುವ ಕಾರನ್ನು ಹಿಂದಿಕ್ಕುವವನಂತೆ ಅಥವಾ ಹಿಂದಕ್ಕೆ ಕಾರು ಚಲಾಯಿಸುವವನಂತೆ ಅಥವಾ ಸಂಚಾರ ದಟ್ಟಣೆಯ ನಡುವೆ ಸಿಕ್ಕಿಹಾಕಿಕೊಂಡವನಂತೆ. ಇಡೀ ಶಾಲೆಯಲ್ಲೂ ಫೌಂಡೇಶನ್ ಬಳಗದಲ್ಲೂ ಆದಿತ್ಯ ತನ್ನ ಇಂತಹ ಚಟುವಟಿಕೆಗಳಿಂದಾಗಿ

ಹೆಸರುವಾಸಿಯಾಗಿದ್ದ. ಗುಡ್ಡಗಾಡು ಪ್ರದೇಶದ ಸಂಚಾರ ಸಾರಿಗೆಯನ್ನು ಕುರಿತ ಆತನ ತಿಳಿವಳಿಕೆ ಕುರಿತು ಎಲ್ಲರಿಗೂ ಅದ್ಭುತವೆನಿಸುತ್ತಿತ್ತು. ಇಷ್ಟರಮಟ್ಟಿಗೆ ಕಲ್ಪನಾಶಕ್ತಿ ಇರುವ ಮಕ್ಕಳನ್ನು ನಾನು ನನ್ನ ಜೀವನದಲ್ಲಿ ಇದುವರೆಗೆ ಕಂಡಿಲ್ಲ. ಇಷ್ಟೆಲ್ಲದರ ಮೇಲೆ ಅವನಿಗಿರುವ ಚಿತ್ರ ರಚನೆಯ ಕೌಶಲವು ಕೇಕ್ನ ಮೇಲಿರಿಸಿದ ಐಸಿಂಗ್ ಅಲಂಕಾರದಂತೆ ಅವನ ವ್ಯಕ್ತಿತ್ವವನ್ನು ಮತ್ತಷ್ಟು ವರ್ಣಮಯಗೊಳಿಸಿತ್ತು. ಕೇವಲ A4 ಅಳತೆಯ ಹಾಳೆಯ ಮೇಲೆ ಅವನು ರಚಿಸುತ್ತಿದ್ದ ಹೆಲಿಕಾಪ್ಟರ್, ಸಂಚಾರದಟ್ಟಣೆಯಲ್ಲಿ ಸಿಲುಕಿಕೊಂಡು ಉದ್ದಕ್ಕೂ ಸಾಲುಗಟ್ಟಿ ನಿಂತಿರುವ ಕಾರುಗಳು, ಅವುಗಳನ್ನು ನಿಭಾಯಿಸುತ್ತಿರುವ ಟ್ರಾಫಿಕ್ ಪೊಲೀಸ್, ಅದರೆಡೆಯಲ್ಲಿ ಅವನದ್ದೇ ಆದ ಸ್ವಂತ ಕಾರು, ಆಂಬುಲೆನ್ಸ್, ಸೈಕಲ್ ಮೇಲೆ ಶಾಲೆಗೆ ಹೊರಟಿರುವ ಬಾಲಕ ಹಾಗೂ ಇಂತಹ ಇನ್ನಷ್ಟು ಚಿತ್ರಗಳು. A4 ಅಳತೆಯ ಹಾಳೆಯ ಇಂಚಿಂಚೂ ಬಿಡದೆ ಚಿತ್ರ ಬರೆದಿರುತ್ತಿದ್ದ. ಇವೆಲ್ಲವೂ ಹಾಳೆಯ ಮೇಲೆ ಆಯಾ ಜಾಗಗಳಲ್ಲಿ ಒಂದು ತರ್ಕಬದ್ಧವಾದ ಕತೆಯ ಹಾಗೆ ಮೂಡಿರುತ್ತಿತ್ತು. ನಮ್ಮ ಆದಿತ್ಯ ಈ ಕತೆ ಹೇಳಲು ತುದಿಗಾಲಿನಲ್ಲಿ ನಿಂತಿರುತ್ತಿದ್ದ.

ಚಿತ್ರಕಲೆಯಲ್ಲಿರುವ ಅವನ ಆಸಕ್ತಿಯನ್ನು ಒಂದು ವರ್ಷದಿಂದ ಈಚೆಗೆ ಗಮನಿಸತೊಡಗಿದ ಮೇಲೆ ಲಭ್ಯವಿರುವ ಎಲ್ಲ ಅವಕಾಶಗಳೂ ಅವನಿಗೆ ಸಿಗುವಂತೆ ನೋಡಿಕೊಂಡಿದ್ದೆ. ಅವನಿಗೆ ಬೇಕೆನಿಸಿದಾಗಲೆಲ್ಲ ಚಿತ್ರ ರಚನೆ ಮಾಡಲು ಮತ್ತು ಕತೆಗಳನ್ನು ಹೇಳಲು ಬಿಟ್ಟುಬಿಟ್ಟಿದ್ದೆ. ಕೆಲವೊಮ್ಮೆ ನನಗನ್ನಿಸಿದ್ದಿದೆ, ನಾನು ಆದಿತ್ಯನಿಗೆ ತಕ್ಕ ಶಿಕ್ಷಕನಲ್ಲ. ಚಿತ್ರ ರಚನೆ ಮಾತ್ರವಲ್ಲದೆ ಅವನು ಯಾವಾಗಲೂ ಎಲ್ಲದರಲ್ಲೂ ಮುಂದಿದ್ದ, ಧೈರ್ಯವಂತನಾಗಿದ್ದ, ಸತ್ಯಸಂಧನಾಗಿದ್ದ, ಮತ್ತು ಪ್ರಾಮಾಣಿಕನಾಗಿದ್ದ. ಆದಿತ್ಯನಿಂದಾಗಿ ನಮ್ಮ ಯೋಜನೆಗಳು ಯಾವಾಗಲೂ ಯಶಸ್ವಿಯಾಗುತ್ತಿದ್ದವು ಎಂದು ಬೇಕಾದರೆ ಹೇಳಬಹುದು.

ಅವನನ್ನು ಭೇಟಿಯಾದಲ್ಲಿಂದ ತೊಡಗಿ ಹೇಳುವುದಾದರೆ ಅವನನ್ನು ಕುರಿತ ಹಲವು ಕತೆಗಳನ್ನೇ ನಾನು ಹೇಳಬಹುದಾಗಿದ್ದರೂ, ಎಲ್ಲವನ್ನೂ ಬರವಣಿಗೆಯಲ್ಲಿ ತರುವಲ್ಲಿನ ಮಿತಿ ನನಗಿದೆ. ಕೆಲ ದಿನಗಳ ಹಿಂದೆ ಊಟದ ವೇಳೆಯಲ್ಲಿ ಅವನ ಒಂದು ಕೈಯಲ್ಲಿ ಜಾರುತ್ತಿರುವ ತನ್ನ ಪ್ಯಾಂಟ್ಸನ್ನೂ, ಮತ್ತೊಂದು ಕೈಯಲ್ಲಿ ಮುರಿದ ಹೆಡ್ ಲೈಟ್ ನ ಚೌಕಟ್ಟೊಂದನ್ನು ಹಿಡಿದುಕೊಂಡು ನನ್ನ ಬಳಿಗೆ ಓಡೋಡಿ ಬಂದ. 'ಸರ್, ಇವರೆಲ್ಲ ಇದನ್ನು ನನ್ನಿಂದ ಕಿತ್ತುಕೊಳ್ಳಲು ನೋಡುತ್ತಿದ್ದಾರೆ, ದಯವಿಟ್ಟು ಇದನ್ನು ಸ್ವಲ್ಪ ಜೋಪಾನವಾಗಿಟ್ಟುಕೊಳ್ಳಿ'ಎಂದು ಹೇಳಿದನು. ನಾನು ಅದನ್ನು ಸ್ವಚ್ಛವಾಗಿ ತೊಳೆದು ಶೌಚಾಲಯದ ಮಾಡಿನ/ಛಾವಣಿಯ ಮೇಲೆ ಇರಿಸಿದೆ. ಅದು ಅಲ್ಲಿ ಜೋಪಾನವಾಗಿ ಇಡಲ್ಪಟ್ಟಿರುವುದು ಅವನಿಗೆ ಖಾತರಿಯಾಗುವವರೆಗೂ ಅದರ ಕಡೆಗೆ ನೋಡುತ್ತಲೇ ಇದ್ದ.

ಕಳೆದ ಬಾರಿಯ ಪಾಲಕರು-ಶಿಕ್ಷಕರ ಸಭೆಯಲ್ಲಿ ಅವನ ತಾಯಿಯೊಂದಿಗೆ ಮಾತನಾಡಿದಾಗ ಆಕೆ ಹೇಳಿದ್ದಳು – ಆಕೆಗೆ ಇರುವುದು ಅವನೊಬ್ಬನೇ ಮಗನಾಗಿದ್ದು, ಅವನು ಹಿಂದೆ ಉಳಿಯಬಾರದೆಂಬುದು ಆಕೆಯ ಕಾಳಜಿಯಾಗಿತ್ತು. ನಾನಾಕೆಯನ್ನು ಸಮಾಧಾನಪಡಿಸಲು ಪ್ರಯತ್ನಿಸಿದೆ ಮತ್ತು ಆಕೆಯ ಮಗನಲ್ಲಿರುವ ವಿಶೇಷ ಗುಣಗಳ ಬಗ್ಗೆ ತಿಳಿಸಿ ಹೇಳಿದೆ ಮತ್ತು ತರಗತಿಯಲ್ಲಿ ಅವನ ಕಲಿಕೆ ಕುರಿತ ವಿಷಯವಾರು ಪ್ರಗತಿ ವರದಿಯನ್ನು ಆಕೆಗೆ ತೋರಿಸಿದೆ. ಆದರೂ ಇಂಗ್ಲಿಷ್ ಮಾಧ್ಯಮದ ಬೋಧನೆ, ಶಿಸ್ತು, ತನ್ನ ಮಗುವಿನಲ್ಲಿ ಶಿಕ್ಷಕರನ್ನು ಕುರಿತು ಇರಬೇಕಾದ ಭಯದ ಕಲ್ಪನೆಗಳು ಅವಳಲ್ಲಿ ದೃಢವಾಗಿದ್ದವು.

ಇಂದು, ಆಕೆಯ ನಿರ್ಧಾರ ಕೇಳಿದ ಅನಂತರ ಆಕೆಯ ಬಗ್ಗೆ ನನಗೆ ಕನಿಕರವಿದ್ದರೂ, ವಿದ್ಯಾವಂತರು, ಸಂವೇದನಶೀಲರು ಎಂದು ಕರೆಸಿಕೊಳ್ಳುವ ತಂದೆ ತಾಯಂದಿರ ಮೇಲೆ ನನಗೆ ಕೋಪ ಬರುತ್ತಿದೆ. ಆದಿತ್ಯನನ್ನು ಕುರಿತು ನನಗೆ ಅತೀವ ಬೇಸರವಿದೆ. ತನ್ನ ಹೆತ್ತವರು ತಾನೇನು ಮಾಡಬೇಕೆಂದು ಬಯಸುತ್ತಾರೋ ಅವೆಲ್ಲವನ್ನು ಅವನು ಮಾಡುವ ಸಾಧ್ಯತೆಗಳಿವೆ. ಆದರೆ, ತಾನು ಯಾವುದರಲ್ಲಿ ಆಸಕ್ತಿ ಹೊಂದಿದ್ದಾನೋ ಅಥವಾ ಮಾಡಬೇಕೆಂದು ಬಯಸಿದ್ದಾನೋ ಅವನ್ನು ಮಾಡಲು ಅವನಿಗೆ ಸಾಧ್ಯವಾಗುವುದಿಲ್ಲ. ತನ್ನ ಆಸಕ್ತಿಯ ವಿಷಯವನ್ನು ಕುರಿತು ತೀವ್ರ ಅನುರಾಗ ಹೊಂದಿರುವ ಇಂತಹ ಸಾಟಿಯಿಲ್ಲದ ಕಲಾವಿದರು ಪುಸ್ತಕಗಳ ಹೊರೆಯ ಕೆಳಗೆ ಮತ್ತು ಬದುಕಿನ ಬವಣೆಗಳ ಅಡಿಯಲ್ಲಿ ನಲುಗಿ ತ್ಯಾಗ ಮಾಡಬೇಕಾಗಿ ಬರುತ್ತದೆ. ಇಲ್ಲಿ ತನ್ನ ಯಾವುದೇ ತಪ್ಪುಗಳಿಲ್ಲದಿದ್ದರೂ ದೊಡ್ಡ ಮಟ್ಟದಲ್ಲಿ ಎಲ್ಲವನ್ನೂ ಕಳೆದುಕೊಳ್ಳುವವನು ಆ ಮಗುವೇ ಆಗಿರುತ್ತಾನೆ. ಜೊತೆಗೆ ನಾನು ಏನನ್ನೂ ಮಾಡಲಾಗದ ಅಸಹಾಯಕನಾಗಿಬಿಡುತ್ತೇನೆ. ನನ್ನ ಮಾರ್ಗದರ್ಶಕರಾಗಿರುವ ಪ್ರಸಾದ್ ಅವರೊಂದಿಗೆ ನಾನು ಈ ಕುರಿತು ಹಂಚಿಕೊಂಡೆ. ಆದಿತ್ಯನ ತಾಯಿಯೊಂದಿಗೆ ನಾವಿಬ್ಬರೂ ಕುಳಿತು ಮಾತನಾಡಲು ಸಾಧ್ಯವಾಗುವಂತೆ ಆಕೆಯನ್ನು ಮರುದಿವಸ ಬರಹೇಳಲು ಅವರು ತಿಳಿಸಿದ್ದಾರೆ. ಈಗ ನನ್ನೆಲ್ಲ ಭರವಸೆಗಳೂ ನಾಳೆಗಾಗಿ ಕಾದು ಕುಳಿತಿವೆ.

**16ನೇ ಮಾರ್ಚ್ 2013, ಶನಿವಾರ:**

ಆದಿತ್ಯನ ತಾಯಿ ಬೆಳಗ್ಗೆ 10 ಗಂಟೆಯ ಸಮಯಕ್ಕೆ ಆಗಮಿಸಿದರು. ಪ್ರಸಾದ್ ಅವರು ಮತ್ತು ನಾನು ಅವರೊಂದಿಗೆ ಮಾತನಾಡಿ ಈ ಶಾಲೆಯಿಂದ ಅವನನ್ನು ಬಿಡಿಸುವುದಕ್ಕೆ ಇರುವ ಕಾರಣಗಳನ್ನು ತಿಳಿಯಲು ಪ್ರಯತ್ನಿಸಿದೆವು. ಈ ಶಾಲೆಯಲ್ಲಿನ ಬೋಧನಾ ಮಾಧ್ಯಮವು ಇಂಗ್ಲಿಷ್ ಅಲ್ಲದಿರುವ ಕಾರಣಕ್ಕಾಗಿ ಆದಿತ್ಯನನ್ನು ಬೇರೆ ಶಾಲೆಗೆ ಸೇರಿಸುವ ಇಂಗಿತವನ್ನು ಆಕೆ ವ್ಯಕ್ತಪಡಿಸಿದರು. ಆದಿತ್ಯನನ್ನು ಮತ್ತೊಂದು ಸಲ ಭೇಟಿ ಮಾಡುವ ಸಲುವಾಗಿ ನಾನು ಉದ್ದೇಶಪೂರ್ವಕಾಗಿಯೇ ಅವನಿಗೂ ಕೂಡ ತನ್ನ ತಾಯಿಯ ಜೊತೆಯಲ್ಲಿ

ಬರುವಂತೆ ತಿಳಿಸಿದ್ದೆ. ಮತ್ತು ಕೊನೆಯ ಬಾರಿಗೆ ಅನುಪಮವಾದ ಅವನ ಮುಗುಳ್ನಗುವನ್ನು ಕಣ್ತುಂಬಿಕೊಂಡೆ.

ಇಂದಿಗೆ ನಾಲ್ಕು ವರ್ಷಗಳೇ ಕಳೆದುಹೋದವು. ನಾವು ಅದೇ ಹಳ್ಳಿಯಲ್ಲಿಯೇ ಉಳಿಯುವುದರಿಂದ, ಆದಿತ್ಯ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿರುವುದನ್ನು, ಅಂಗಡಿಗಳಲ್ಲಿ ವಸ್ತುಗಳನ್ನು ಕೊಳ್ಳುತ್ತಿರುವುದನ್ನು ನೋಡುತ್ತಿರುತ್ತೇನೆ. ಆದರೆ ಅವನ ಮುಖದ ಮೇಲಿದ್ದ ಮಾಂತ್ರಿಕ ಹೊಳಪನ್ನಾಗಲೀ, ಆತ್ಮವಿಶ್ವಾಸದ ನಡಿಗೆಯನ್ನಾಗಲೀ ನಾನು ಮತ್ತೆ ಕಾಣಲಿಲ್ಲ. ಆದಿತ್ಯನಿಂದ ಅವನ ಆ ಮಾಂತ್ರಿಕ ಚೆಲುವನ್ನು ಯಾರೋ ಕಸಿದುಕೊಂಡುಬಿಟ್ಟಂತೆ. ಹೀಗಿದ್ದರೂ, ಎಂದಿಗೂ ಈ ರೀತಿ ಆಗಬಾರದು ಎನ್ನುವುದೇ ನನ್ನ ಆಶಯ. ಆಗ ಮಾತ್ರ ಆದಿತ್ಯನಿಗೂ ಒಳಿತಾಗುವುದು ಮತ್ತು ನನಗೂ ದೊಡ್ಡ ಸಮಾಧಾನವಾಗುವುದು. ಆ ಆಸೆ ಈಡೇರುವುದೇ ಎಂಬುದನ್ನು ಕಾಲವೇ ಹೇಳಬೇಕು.

ರವಿ ಅವರು ಉತ್ತರಕಾಶಿಯ ಅಜೀಂ ಪ್ರೇಮ್ ಜೀ ಶಾಲೆಯಲ್ಲಿ ೨೦೧೨ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಾಥಮಿಕ ತರಗತಿಗಳಲ್ಲಿ ಎಲ್ಲ ವಿಷಯಗಳ ಕಲಿಕಾ ಬೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರನ್ನು ravi.singh@azimpremjifoundation.org ಇಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದಾಗಿದೆ.